ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

ದಿನಾಂಕ : 03–10–2017

ಪ್ರಕಟಣೆಯ ಕೃಪೆಗಾಗಿ

**ಜಿಎಸ್‌ಟಿ – ಒಂದು ಐತಿಹಾಸಿಕ ಪರೋಕ್ಷ ತೆರಿಗೆ ಸುಧಾರಣೆ – ಪ್ರೊ. ಆರ್ ಎಂ ಚಿಂತಾಮಣಿ**

ಕೊಳ್ಳೇಗಾಲ 03–10–2017 : ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿಧಿಸುತ್ತಿದ್ದ ವಿವಿಧ ರೀತಿಯ ಪರೋಕ್ಷ ತೆರಿಗೆಗಳ ಬದಲಾಗಿ ಇದೇ 2017 ಜುಲೈ ಒಂದರಿಂದ ಸರಕು ಮತ್ತು ಸೇವಾ ತೆರಿಗೆಯನ್ನು ಜಾರಿಗೆ ತರಲಾಗಿದ್ದು, ಇದೊಂದು ಐತಿಹಾಸಿಕ ಪರೋಕ್ಷ ತೆರಿಗೆ ಸುಧಾರಣೆ ಎಂದು ಸ್ನಾತಕೋತ್ತರ ವಿಭಾಗದ ನಿವೃತ್ತ ನಿರ್ದೇಶಕರಾದ ಪ್ರೊ. ಆರ್ ಎಂ ಚಿಂತಾಮಣಿಯವರು ತಿಳಿಸಿದರು.

ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಅರ್ಥಶಾಸ್ತ್ರ ವಿಭಾಗದಿಂದ ಸರಕು ಮತ್ತು ಸೇವ್ತಾ ತೆರಿಗೆ ಎಂಬ ವಿಷಯದ ಮೇಲೆ ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಜಗತ್ತಿನಾಧ್ಯಂತ ಈಗ ಚೀನ, ಜಪಾನ ಮತ್ತು ಬ್ರೆಜಿಲ್ ಸೇರಿದಂತೆ 160 ದೇಶಗಳಲ್ಲಿ ಇದು ಜಾರಿಯಲ್ಲಿದೆ. ಮೂಲ ಪರಿಕಲ್ಪನೆಯನ್ನು ತಮ್ಮ ದೇಶದ ಪರಿಸ್ಥಿತಿಗಳಿಗೆ ತಕ್ಕಂತೆ ಮಾರ್ಪಾಡುಗಳನ್ನು ಮಾಡಿಕೊಂಡು ಜಾರಿಗೆ ತರಲಾಗುತ್ತಿದೆ, ಅನುಭವದಿಂದ ಬದಲಾವಣೆಗಳನ್ನು ಮಾಡಲಾಗುತ್ತಿದೆ. ನಮ್ಮ ದೇಶದಲ್ಲಿ 1978ರಿಂದಲೇ ಈ ಬಗ್ಗೆ ಅಧ್ಯಯನ ನಡೆಯುತ್ತಿದ್ದು ಸದರ್ಕಾರಗಳು ಪರೋಕ್ಷ ತೆರಿಗೆ ಸುಧಾರಣೆಗಳ ಬಗ್ಗೆ ಚಿಂತಿಸುತ್ತಲೇ ಇದ್ದವು. ಮೊದಲು ತೆರಿಗೆಯ ಬದಲಾಗಿ ಮೌಲ್ಯವರ್ಧಿತ ತೆರಿಗೆ ತಂದು ನಂತರ ಜಿ.ಎಸ್.ಟಿ ಜಾರಿಗೆ ತರಬೇಕೆಂಬ ಚಿಂತನೆ ಇತ್ತು. ಕಾಲ ಕಾಲಕ್ಕೆ ಸಭೆ ಸೇರಿ ಉದ್ಭಾವಿಸುವ ಸಮಸ್ಯೆಗಳನ್ನು ಬಗೆಹರಿಸುತ್ತಾ ಜುಲೈ–2017 ರಿಂದ ಜಿ.ಎಸ್.ಟಿ ದೇಶಾದ್ಯಾಂತ ಜಾರಿಯಾಗಿದೆ ಎಂದು ತಿಳಿಸಿದರು.

ಶೇ.5, 12 18 ಮತ್ತು 28 ಹೀಗೆ ಒಟ್ಟು ನಾಲ್ಕು ಪ್ರಮುಖ ತೆರಿಗೆ ದರಗಳಿದ್ದು, ಚಿನ್ನ, ಬೆಳ್ಳಿ ವಜ್ರ ಮುಂತಾದ ಬೆಲೆ ಬಾಳುವ ವಸ್ತುಗಳಿಗಾಗಿ ಶೇ.3ರ ವಿಶೇಷ ದರವಿದೆ. ತೆರಿಗೆ ಮುಕ್ತ ವಸ್ತು ಮತ್ತು ಸೇವೆಗಳಲ್ಲಿ ಆಹಾರ ಧಾನ್ಯಗಳು ಮತ್ತು ಸಾಮಾನ್ಯ ಜನ ಬಳಸುವ ನಿತ್ಯೋಪಯೋಗಿ ವಸ್ತುಗಳಲ್ಲದೇ ಶಿಕ್ಷಣ ಮತ್ತು ಆರೋಗ್ಯ ಸೇವೆಗಳನ್ನು ಸಹ ಜಿ.ಎಸ್‌ಟಿಗೆ ಸೇರಿಸಲಾಗಿದೆ. ಈಗಾಗಲೇ ಪಠ್ಯಕ್ರಮಗಳಲ್ಲಿ ಸರಕು ಮತ್ತು ಸೇವಾ ತೆರಿಗೆಯ ವಿಷಯವನ್ನು ಹೊಸದಾಗಿ ಸೇರಿಸಿರುವುದರಿಂದ ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ಜಿಎಸ್‌ಟಿ ವಿಷಯದ ಬಗ್ಗೆ ಸಂಪೂರ್ಣ ಮಾಹಿತಿಯನ್ನು ತಿಳಿದುಕೊಳ್ಳಬೇಕು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಚಾರ್ಯರಾದ ಪ್ರೊ. ಉಮೇಶರವರು ವಹಿಸಿದ್ದರು.

ವೇದಿಕೆಯಲ್ಲಿ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ. ಬಿ. ಸೋಮಣ್ಣರವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ವಿಭಾಗದ ಅಧ್ಯಾಪಕರು ಹಾಗೂ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.


JSS COLLEGE FOR WOMEN
KOLLEGAL
PLANNING FORUM
ಪ್ರೊ. ಉಮೇಶ
ಕೊಳ್ಳೇಗಾಲ.

